# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 1353

ಸದಸ್ಯರ ಹೆಸರು : **ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)**

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 30.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಅಡಿಕೆ ಬೆಳೆಗೆ ಕೊಳೆರೋಗ, ಹಳದಿ ಎಲೆರೋಗ, ಎಲೆಚುಕ್ಕೆ ರೋಗ, ಬೇರು ರೋಗ ಇತ್ಯಾದಿ ರೋಗಗಳು; ಬಂದಿದ್ದು ಅಲ್ಲಿನ ರೈತರು ಆತಂತಕದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಗಮನಕ್ಕೆ ಬಂದಿದೆ.<br>ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಅಡಿಕೆ ಬೆಳೆಗೆ ತಗಲಿರುವ ರೋಗಗಳ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಕೊಳೆ ರೋಗದ ನಿಯಂತ್ರಣಕ್ಕೆ ಶೇ. 1ರ ಬೋರ್ಡೋದ್ರಾವಣವನ್ನು ಅಡಿಕೆ ಗೊನೆ ಹಾಗೂ ಸುಳಿ ಭಾಗಕ್ಕೆ ಸಿಂಪರಣೆ ಮಾಡಲು ತಾಂತ್ರಿಕ ಸಲಹೆ ನೀಡಲಾಗಿರುತ್ತದೆ.<br>2. ಬೋರ್ಡೋದ್ರಾವಣ ವೈಜ್ಞಾನಿಕವಾಗಿ ತಯಾರಿಸುವ ಬಗ್ಗೆ ಕರಪತ್ರಗಳನ್ನು ಪಂಚಾಯ್ತಿವಾರು ನೀಡಲಾಗಿರುತ್ತದೆ.<br>3. ರೋಗದ ನಿಯಂತ್ರಣದ ಕುರಿತಾಗಿ ರೈತರಲ್ಲಿ ಅರಿವು ಮೂಡಿಸಲು ತರಬೇತಿ / ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>4. ರಾಜ್ಯವಲಯ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣಾ ಔಷಧಿ ಖರೀದಿಗೆ ರೂ. 1.64 ಲಕ್ಷಗಳ ಸಹಾಯಧನವನ್ನು 21.57ಹೆ ಪ್ರದೇಶದ 113 ರೈತರಿಗೆ ನೀಡಲಾಗಿದೆ.<br>5. ಅಡಿಕೆ ಎಲೆ ಚುಕ್ಕೆ ರೋಗವು ಬೆಳ್ತಂಗಡಿ ತಾಲೂಕಿನ ಮಲವಂತಿಗೆ ಗ್ರಾಮ ಪಂಚಾಯತಿಯ ಎಳನೀರು ಭಾಗದಲ್ಲಿ ಹೆಚ್ಚು ಕಂಡುಬಂದಿದ್ದು, ರೂ 1.60 ಲಕ್ಷ ಅನುದಾನದಲ್ಲಿ ಎಲೆಚುಕ್ಕೆ ರೋಗದ ನಿವಾರಣೆಗೆ CPCRI ಸಂಶೋಧನಾ ಕೇಂದ್ರದ ವಿಜ್ಞಾನಿಗಳ ಶಿಫಾರಸ್ಸಿನಂತೆ ಸಸ್ಯ ಸಂರಕ್ಷಣ ಔಷಧಿಗಳನ್ನು 40 ಜನ ರೈತರಿಗೆ ಉಚಿತವಾಗಿ ವಿತರಿಸಲಾಗಿರುತ್ತದೆ.<br>6. ಅಡಿಕೆ ಎಲೆ ಚುಕ್ಕೆ ರೋಗವು ಬೆಳ್ತಂಗಡಿ |

| | | |
|---|---|---|
| | | ತಾಲ್ಲೂಕಿನ ಇತರೆ ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಹರಡುತ್ತಿದ್ದು, ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ವಿವಿಧ ಸಂಘ ಸಂಸ್ಥೆಗಳು/ ಬ್ಯಾಂಕ್, ಗ್ರಾಮ ಪಂಚಾಯತ್, ಕೃಷಿ ವಿಜ್ಞಾನ ಕೇಂದ್ರ ಮತ್ತು CPCRI, ವಿಟ್ಲ ರವರ ಸಹಯೋಗದೊಂದಿಗೆ ತಾಂತ್ರಿಕ ಕಾರ್ಯಾಗಾರಗಳನ್ನು ಆಯೋಜಿಸಿ ಮಾಹಿತಿ ನೀಡಲಾಗುತ್ತಿದೆ.<br>7. ಅಡಿಕೆ ಮರಗಳು ಎತ್ತರವಾಗಿದ್ದು, ಶಿಲೀಂದ್ರನಾಶಕಗಳ ಸಿಂಪರಣೆ ಕಷ್ಟಕರವಾಗಿರುವ ಕಾರಣ ಸಿಂಪರಣೆಗೆ ಅನುವು ಆಗುವಂತೆ 2022-23ನೇ ಸಾಲಿನ ಕೇಂದ್ರ ಸರ್ಕಾರದ SMAM (Sub Mission on Agricultural Mechanization) ಯೋಜನೆಯಡಿ ಕಾರ್ಬನ್ ಫೈಬರ್ ದೋಟಿ ಬಳಕೆಯನ್ನು ಉತ್ತೇಜಿಸಲು ಸಹಾಯಧನ ಒದಗಿಸಿಲಾಗುತ್ತಿದೆ.<br>8. ಹವಾಮಾನ ವೈಪರೀತ್ಯದಿಂದ ತೋಟಗಾರಿಕೆ ಬೆಳೆಗಳಲ್ಲಿ ಉಂಟಾಗುವ ನಷ್ಟವನ್ನು ತುಂಬಿಕೊಡಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೆಳೆಯನ್ನು ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಳಪಡಿಸಲಾಗಿರುತ್ತದೆ. |
| ಆ) | ಅಡಿಕೆ ಬೆಳೆಯ ರೋಗದ ಬಗ್ಗೆ ರೈತರಿಗೆ ಆಗಿರುವ ನಷ್ಟ ಅಂದಾಜು ಪರಿಹಾರ ಒದಗಿಸುವುವಲ್ಲಿ ಸಮೀಕ್ಷೆ ನಡೆಸಲಾಗಿದಯೇ; ಸಮೀಕ್ಷೆ ನಡೆಸಿದ್ದಲ್ಲಿ ಪರಿಹಾರ ನೀಡಲಾಗಿದೆಯೇ? | ಪ್ರಕೃತಿ ವಿಕೋಪದಿಂದ ಹಾಗೂ ಅತಿವೃಷ್ಟಿಯಿಂದ ಹಾನಿಯಾಗಿರುವ ಅಡಿಕೆ ಬೆಳೆಯ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ ಹಾನಿಯ ಪ್ರಮಾಣ ಮತ್ತು ನೀಡಬಹುದಾದ ಪರಿಹಾರ ಇನ್‌ಪುಟ್ ಸಬ್ಸಿಡಿಯ ವರದಿಯನ್ನು ತಯಾರಿಸಿರುತ್ತಾರೆ. ಅದರಂತೆ, ಬೆಳ್ತಂಗಡಿ ತಾಲೂಕಿನಲ್ಲಿ 7.127 ಹೆ ಪ್ರದೇಶದಲ್ಲಿ 160 ರೈತರಿಗೆ ರೂ. 4.935 ಲಕ್ಷ ಮೊತ್ತದ ಇನ್ ಪುಟ್ ಸಬ್ಸಿಡಿಯನ್ನು NDRF/SDRF ಮಾರ್ಗಸೂಚಿ ಪ್ರಕಾರ ಶಿಫಾರಸ್ಸು ಮಾಡಿ ಕಂದಾಯ ಇಲಾಖೆಯ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆ. |

**ಸಂಖ್ಯೆ: HORTI 633 HGM 2022**

(ಮುನಿರತ್ನ)
**ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**